ಶ್ರೀ ಜಿ. ಬಿ. ಶಂಕರರಾವ್.—ನಮ್ಮದು ಡೈರಿ ಫಾರಂ ಇದೆ. Government have proposed to place some exotic bulls at their disposal so that we can take up cross-breeding programme in the farm and distribute cross-breeding animals to the farmers so that they can also take up cross-breeding programme on a large scale.

Levy Paddy deteriorating in Godowns

175. Sri S. JAYAPRAKASH SHETTY (Brahmavar).—

Will the Minister of State for Food and Civil Supplies be pleased to state :—

(*a*) the quantity of levy paddy collected during the last year in the State ;

(*b*) out of that the quantity of rice distributed during rainy season (lean months) ;

(*c*) whether Government is aware of the fact that large quantities of foodgrains are deteriorating in several godowns for want of distribution ;

(*d*) the number of godowns in Udipi taluk where rice is in stock for want of distribution during 1968-69 together with the quantity of rice in stock ?

Sri B. VITHALDAS SHETTY (Minister of State for Food and Civil Supplies).—

(*a*) 1,01,760 tonnes.

(*b*) In addition to the regular quota of 6,899 tonnes of rice per month a quantity of 85 tonnes per month was allotted during lean months of the year from September to end of December 1969.

(*c*) No such large scale deterioration has been reported.

(*d*) No rice is remaining undistributed in the godowns of Udipi taluk.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—(ಇ)ಗೆ ಉತ್ತರವಾಗಿ ಆ ರೀತಿ ಹೆಚ್ಚು ಪ್ರಮಾಣದಲ್ಲಿ ನಾಶವಾಗುತ್ತಿರುವುದು ವರದಿಯಾಗಿಲ್ಲ ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ಕಡಿಮೆ ಪ್ರಮಾಣದಲ್ಲಿ ನಾಶವಾಗಿದ್ದರೆ, ಅದರ ನಷ್ಟ ಎಷ್ಟಾಗಿದೆ ಎಂದು ಹೇಳುತ್ತೀರಾ ?

† ಶ್ರೀ ಬಿ. ವಿಠಲದಾಸ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನೂ ಡ್ಯಾಮೇಜ್ ಆಗಿಲ್ಲ. ಬೆಂಗಳೂರಿನಲ್ಲಿ ವೀಟ್ ಡ್ಯಾಮೇಜ್ ಆಗಿದೆ ಮತ್ತು ಬಿಜಾಪುರ ಮತ್ತು ಧಾರವಾಡದಲ್ಲಿ ಈ ಎರಡು ಜಿಲ್ಲೆಗಳಲ್ಲಿ ಮಾತ್ರ ಸ್ವಲ್ಪ ಡ್ಯಾಮೇಜ್ ಆಗಿದೆ.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಇದೇ ಉಡುಪಿ ತಾಲ್ಲೂಕಿನಲ್ಲಿ 4-5 ಕೋ ಆಪರೇಟೀವ್ ಸೊಸೈಟಿಗಳಲ್ಲಿ 450 ಕ್ವಿಂಟಾಲ್ ಅಷ್ಟು ಹಾಳಾಗಿದೆ ಎಂದು ನನಗೆ ಗೊತ್ತಿದೆ. ಅದು ನಿಜವೇ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಇದುವರೆಗೆ ಸರ್ಕಾರದ ಅವಗಾಹನೆಗೆ ಬಂದಿಲ್ಲ. ತಾವು ಅದನ್ನು ಬರೆದು ಕಳುಹಿಸಿದರೆ ವಿಚಾರಣೆ ನಡೆಸಿ ತಮಗೆ ಉತ್ತರ ಕೊಡುತ್ತೇನೆ.

Sri BAPU GOWDA.—Is it not a fact that this year hybrid jawar which has been collected, is getting deteriorated in Hyderabad area? Government have not taken action to distribute it.

Sri B. VITHALADAS SHETTY.—No. ಹೈದ್ರಾಬಾದ್ ಏರಿಯಾದಲ್ಲಿ ನಾವು ಡಿಸ್ಟ್ರಿಬ್ಯೂಟ್ ಎಷ್ಟು ಮಾಡಬೇಕೋ ಅಷ್ಟನ್ನು ಮಾಡಿದ್ದೇವೆ. ಕೆಲವು ಕಡೆ ಬಫರ್‌ಸ್ಟಾಕ್ ಇಟ್ಟು ಕೊಳ್ಳಬೇಕಾಗುತ್ತದೆ. ಯಾವ ಸಂದರ್ಭದಲ್ಲಿ ಯಾವ ಪರಿಸ್ಥಿತಿ ಬರುತ್ತದೆ ಎನ್ನುವುದು ಗೊತ್ತಾಗುವುದಿಲ್ಲ. ಏನಾದರೂ ಎಮರ್ಜೆನ್ಸಿ ಬಂದರೆ ಬೇಕೆಂದು ಬಫರ್ ಸ್ಟಾಕ್ ಇಟ್ಟು ಕೊಳ್ಳುತ್ತೇವೆ. ಇದು ದೇಶದ ಹಿತದೃಷ್ಟಿಯಿಂದ ಮತ್ತು ಜನತೆಯ ಹಿತದೃಷ್ಟಿಯಿಂದ ಈ ರೀತಿ ಬಫರ್‌ಸ್ಟಾಕ್ ಇಟ್ಟುಕೊಳ್ಳುವುದು ಅಗತ್ಯ...

Sri BAPU GOWDA.—My question is not answered.

Mr. SPEAKER.—It does not arise within the scope of the main question. I am sorry I cannot allow it.

ಶ್ರೀ ಬಿ. ಭಾನ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಮೊದಲನೇ ಫಸಲಿನಲ್ಲಿ ಬಂದ ಬತ್ತವನ್ನು ಮಾರಿ ಲಾಭ ಸಂಪಾದನೆ ಮಾಡುತ್ತಾರೆ. ಹೀಗೆ ಕೇರಳಕ್ಕೆ ನಮ್ಮ ಭಾಗದ ಮೂಲಕ ಅಕ್ಕಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಮಾನ್ಯ ಸದಸ್ಯರು ಹೇಳುವಂತಹ ಯಾವ ವಿಚಾರಗಳೂ ಇದುವರೆಗೆ ಸರ್ಕಾರದ ಅವಗಾಹನೆಗೆ ಬಂದಿಲ್ಲ. ಸದಸ್ಯರು ಇದರ ಬಗ್ಗೆ ಎಲ್ಲಿ ಆ ರೀತಿ ಹೋಗುತ್ತಿದೆ ಎನ್ನುವುದನ್ನು ನಿರ್ದಿಷ್ಟವಾಗಿ ತಿಳಿಸಿದರೆ ಅಂತಹ ಸಂದರ್ಭದಲ್ಲಿ ಕೂಡಲೇ ಉಗ್ರ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಆ ಲೆವಿ ಬತ್ತದ ವಸೂಲಿಯಲ್ಲಿ ರೈತರಿಗೆ ತೊಂದರೆಯಾಗುತ್ತಿದೆ ಎಂದು ಕೇಳುತ್ತೇವೆ. ಇದಕ್ಕಾಗಿ ಆಯಾ ಜಿಲ್ಲೆಯಲ್ಲಿ ಬೆಳೆದ ಭತ್ತವನ್ನು ಆಯಾ ಜಿಲ್ಲೆಗೆ ಉಪಯೋಗಿಸಲು ಅವಕಾಶ ಏಕೆ ಮಾಡುವಾರದು? ಆಯಾ ಜಿಲ್ಲೆಯಲ್ಲಿ ಬೆಳೆದ ಭತ್ತ ಅದೇ ಜಿಲ್ಲೆಗೆ ಕೊಡುವುದು ಒಳ್ಳೆಯದಲ್ಲವೇ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಮಾನ್ಯ ಸದಸ್ಯರು ಸೂಚಿಸುವಂತಹ ಸಲಹೆ ಬಹಳ ಸ್ವಾಗತಾರ್ಹವಾದುದು. ಆದರೆ ಕೆಲವು ಜಿಲ್ಲೆಗಳಲ್ಲಿ ಭತ್ತವೇ ಬೆಳೆಯುವುದಿಲ್ಲ. ಎಲ್ಲಿ ಭತ್ತದ ಬೆಳೆ ಇಲ್ಲವೋ ಅಲ್ಲಿಗೆ ಭತ್ತ ಬೆಳೆಯುವ ಕಡೆಗಳಿಂದ ಕಳುಹಿಸಲೇಬೇಕಾಗುತ್ತದೆ. ಈ ರೀತಿ ಒಂದು ಕಡೆ ಬೆಳೆಯುವ ಭತ್ತವನ್ನು ಒಂದೇ ಕಡೆ ಇಡುವುದು ಅಸಾಧ್ಯ. ಎಲ್ಲ ಕಡೆಗೂ ಸಾಗಾಣಿಕೆ ಮಾಡಲೇ ಬೇಕಾಗುತ್ತೆ.

ಶ್ರೀ ಬಿ. ಪಿ. ಗಂಗಾಧರ್.—(ಸಿ)ಗೆ ಉತ್ತರವಾಗಿ ಹೆಚ್ಚು ಪ್ರಮಾಣದಲ್ಲಿ ನಾಶವಾಗಿಲ್ಲ ಎಂದು ಹೇಳಿದೆ. ಆಹಾರ ಧಾನ್ಯಗಳನ್ನು ದಾಸ್ತಾನು ಮಾಡಿರತಕ್ಕ ಮೂರು ಗೋಡೌನ್‌ಗಳಲ್ಲಿ ಇರುವ ಕಾಳುಗಳು ಹುಳುತು ಕೊಳೆತು ನಾಶವಾಗಿರುವುದನ್ನು ನಾವು ನೋಡಿದ್ದೇವೆ. ಇದರಲ್ಲಿ ಸುಮಾರು ಎಂಟು ಸಾವಿರ ಟನ್‌ಗಳಷ್ಟು ದವಸ ನಾಶವಾಗಿದೆ ಮತ್ತು ಸರಕಾರಕ್ಕೆ ಇದರಿಂದ 48 ಲಕ್ಷದಷ್ಟು ಹಣ ನಷ್ಟವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಇದು ದೊಡ್ಡ ಪ್ರಮಾಣದಲ್ಲಿ ನಷ್ಟವಾಗಿದೆ ಎಂದು ಮಾನ್ಯ ಸದಸ್ಯರು ಹೇಳುವುದನ್ನು ಸಂಪೂರ್ಣವಾಗಿ ಒಪ್ಪಲಕ್ಕೆ ಆಗುವುದಿಲ್ಲ. ಕಾರಣವೇನೆಂದರೆ ಎಲ್ಲ ಕಡೆಗಳಲ್ಲೂ ಬಫರ್ ಸ್ಟಾಕು ಇಡಬೇಕೆಂದು ಮಾಡಲಾಗಿದೆ. ಮತ್ತು ಕೆಲವು ಜಿಲ್ಲೆಗಳಲ್ಲಿ ಕೆಲವು ವೇಳೆ ತೊಂದರೆಗಳು ಬರಬಹುದು. ಉದಾಹರಣೆಯಾಗಿ ಮಾನ್ಯ ಸದಸ್ಯರ ಕ್ಷೇತ್ರವಾದ ತುಮಕೂರು ಜಿಲ್ಲೆಯಲ್ಲಿ ಭತ್ತ ದಾಸ್ತಾನು ಇಲ್ಲ ಎಂದು ಕೇಳಿ ಬಂದರೆ ಅಲ್ಲಿಗೆ ಬಫರ್ ಸ್ಟಾಕು ದವಸ ಇಲ್ಲದಿದ್ದರೆ, ವಿತರಣೆ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕಾಗಿ ಸರಕಾರ ಗೋಡೌನ್‌ಗಳಲ್ಲಿ ಆಹಾರ ಧಾನ್ಯಗಳನ್ನು ಶೇಖರಿಸಿಟ್ಟಿದೆ. ಇದನ್ನು ಜನರಿಗೆ ಸಹಾಯ ಮಾಡುವುದಕ್ಕಾಗಿ ಸರಕಾರ ಮಾಡುತ್ತಿದೆ. ಅಲ್ಲಲ್ಲಿ ಆಹಾರ ಸಾಮಗ್ರಿಗಳು ಸ್ವಲ್ಪಮಟ್ಟಿಗೆ ಹಾಳಾಗಿ ಹೋಗುವುದು ಸರ್ವೆ ಸಾಮಾನ್ಯವಾಗಿದೆ. ಇದನ್ನು ತಪ್ಪಿಸಲಿಕ್ಕೆ ಯಾವ ಸರಕಾರಕ್ಕೂ ಆಗುವುದಿಲ್ಲ. ಈ ರೀತಿ ದಾಸ್ತಾನು ಮಾಡದೆ ಇದ್ದರೆ ಜನರಿಗೆ ತೊಂದರೆಯಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಲೆವಿ ಭತ್ತದಿಂದ ಸುಮಾರು 1,01,760 ಟನ್ನುಗಳಷ್ಟು ಭತ್ತ ಬಂದಿದೆ ಎಂದು ಹೇಳುತ್ತೀರಿ. ಇದನ್ನು ರೆವಿದರದಲ್ಲಿ ಕೊಳ್ಳಲಾಯಿತೇ ? ಇಲ್ಲವೇ ಮಾರ್ಕೆಟ್ ದರದಲ್ಲಿ ಕೊಳ್ಳಲಾಯಿತೇ ? ಎರಡನೇದು ಆಫರು ಸ್ವೀಕರು ಮಾಡುವಾಗ ಕಂಟ್ರಾಕ್ಟರುಗಳ ಇಲ್ಲವೇ ಇತರ ಏಜೆನ್ಸಿಗಳ ಮೂಲಕ ಯಾವ ರೇಟಿನಲ್ಲಿ ಖರೀದಿ ಮಾಡಲಾಗಿದೆ ಎನ್ನುವುದನ್ನೇನಾದರೂ ಯೋಚನೆ ಮಾಡಿದ್ದೀರಾ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಅವನ್ನೆಲ್ಲ ನಾನು ಯೋಚನೆ ಮಾಡಿದ್ದೇನೆ. ಪ್ರೊಕ್ಯೂರ್‌ಮೆಂಟ್ ಏಜೆನ್ಸಿಗಳಿಗೆ ಯಾವ ರೇಟು ಕೊಡಬೇಕು ಎನ್ನುವುದನ್ನೂ ನೋಡಿದ್ದೇವೆ, ಇದರಿಂದ ಜನರಿಗೆ ತೊಂದರೆಯಾಗುವುದಿಲ್ಲ ಎಂದು ಮಾಡಲಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಬಹಳ ಹೆಚ್ಚಿನ ಆಹಾರಧಾನ್ಯ ಕೆಟ್ಟು ಹೋಗಿಲ್ಲ ಎಂದು ಇಲ್ಲಿ ಮಾನ್ಯ ಮಂತ್ರಿಗಳು ಹೇಳುತ್ತಾರೆ. ನಾವು ಸೆಂಟ್ರಲ್ ಫುಡ್ ಕಾರ್ಪೊರೇಷನ್‌ನಲ್ಲಿ ಇರುವುದರಿಂದ ಎಷ್ಟು ಕಡೆ ದವನಗಳು ಹಾಳಾಗಿವೆ ಎನ್ನುವುದು ಗೊತ್ತಿದೆ. ನಾನು ತುಮ್ಕೂರಲ್ಲಿ ಕೇಳುವುದು ನಮ್ಮ ನೆರೆಯ ರಾಜ್ಯವಾದ ಮದ್ರಾಸಿನಲ್ಲಿ ಪೂರ್ತಿಯಾಗಿ ಫುಡ್ ಕಂಟ್ರೋಲನ್ನು ತೆಗೆದುಹಾಕಿದ್ದಾರೆ ಮತ್ತು ಈಗ ಅಲ್ಲಿದ್ದ ಆಹಾರ ಇಲಾಖೆಯನ್ನು ಸಂಪೂರ್ಣವಾಗಿ ತೆಗೆಯುಬಿಟ್ಟಿದ್ದಾರೆ. ಈ ರೀತಿ ಇಲ್ಲೂ ಕೂಡ ಪೂರ್ತಿಯಾಗಿ ರೇಷನಿಂಗನ್ನು ತೆಗೆದುಬಿಡಲು ಇದು ಸೂಕ್ತ ಸಮಯವಲ್ಲವೇ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಮಾನ್ಯ ಸದಸ್ಯರು ಮದ್ರಾಸಿನಲ್ಲಿ ಸಂಪೂರ್ಣವಾಗಿ ಕಂಟ್ರೋಲು ತೆಗೆದಿದ್ದಾರೆಂದು ಹೇಳಿದರು, ಅದನ್ನು ನಾನು ಸಂಪೂರ್ಣವಾಗಿ ಒಪ್ಪಲಿಕ್ಕಾಗುವುದಿಲ್ಲ. ಮದ್ರಾಸಿನಲ್ಲಿ ಹಾಗೂ ಕೊಯಮತ್ತೂರಿನಲ್ಲಿ ಫಾರ್ಮರ್ ರೇಷನಿಂಗು ಇದ್ದೇ ಇವೆ. ನಮ್ಮಲ್ಲಿರುವುದು ಇನ್‌ಫಾರಮಲ್ ರೇಷನಿಂಗು ಇದರಂತೆ ಅಲ್ಲ ಇಲ್ಲ. ನಮ್ಮಲ್ಲಿ ಈಗ ಬೆಂಗಳೂರು ಹಾಗೂ ಕೆ. ಜಿ. ಎಫ್.ನಲ್ಲಿ ಈ ಇನ್‌ಫಾರ್ಮಲ್ ರೇಷನಿಂಗ್ ಪದ್ಧತಿ ಇದೆ. ಇದೇ ರೀತಿ ಈಗ ಮದ್ರಾಸ್‌ನವರು ಕೂಡ ಇನ್‌ಫಾರ್ಮಲ್ ರೇಷನಿಂಗು ಪದ್ಧತಿಯನ್ನು ಜಾರಿಗೆ ತರಬೇಕೆಂದಿದ್ದಾರೆ. ಅಲ್ಲದೆ ನಮ್ಮಲ್ಲಿ ಡಿಸ್ಟ್ರಿಕ್ಟ್‌ನಿಂದ ಡಿಸ್ಟ್ರಿಕ್ಟ್‌ಗೆ ಧಾನ್ಯ ರವಾನೆ ರೆಸ್ಟ್ರಿಕ್ಷನ್‌ಗಳಿಲ್ಲ. ಮದ್ರಾಸಿನಲ್ಲಿ ಕೂಡ ನಮ್ಮಲ್ಲಿರುವಂತೆ ಇನ್‌ಫಾರ್‌ಮಲ್ ರೇಷನಿಂಗ್ ತರಬೇಕೆಂದಿದ್ದಾರೆ ಎನ್ನುವುದನ್ನು ಮಾನ್ಯ ಸದಸ್ಯರ ಅವಗಾಹನೆಗೆ ತರಲು ಇಚ್ಛಿಸುತ್ತೇನೆ.

Smt. WINNIFRED F. FERNANDES.—Has it come to the notice of the Government that in South Canara 6,000 quintals of rice and 29,000 quintals of paddy procured in 1969 is still rotting in the godown ?

Sri B. VITHALDAS SHETTY.—It has not come to the notice of the Government so far. I will take note of it.

ಶ್ರೀ ಆರ್. ಜಿ. ಪಾಲ.—ಭತ್ತದ ಪೀಕು ಈ ಸಾಲಿನಲ್ಲಿ ಹೆಚ್ಚಾಗಿ ಬಂದು ಮತ್ತು ಲೆವಿ ಭತ್ತ ಕೂಡ ಸಾಕಾದಷ್ಟು ಸರ್ಕಾರಕ್ಕೆ ಬಂದಿರುವುದರಿಂದ ಇನ್ನು ಮುಂದೆ ಈ ಲೆವಿ ಭತ್ತ ವಸೂಲುಮಾಡುವುದನ್ನು ನಿಲ್ಲಿಸಿದರೆ ಒಳ್ಳೆಯದೆಂದು ಹೇಳಿ ರೈತರುಗಳು ಸರಕಾರಕ್ಕೆ ಮನವಿಗಳನ್ನು ಕಳುಹಿಸಿಲ್ಲವೇ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಇಲ್ಲಿಯ ತನಕ ನನಗೆ ರಾಜ್ಯದ ಯಾವ ಕಡೆಯಿಂದಲೂ ದೂರುಗಳು ಬಂದಿಲ್ಲ ಮತ್ತು ಯಾವ ರೈತನೂ ನಮಗೆ ತೊಂದರೆಯಾಯಿತು ಎಂದು ದೂರನ್ನು ಕೊಟ್ಟಿಲ್ಲ. ಎಲ್ಲ ಕಡೆಯಲ್ಲೂ ಬೆಳೆ ಚೆನ್ನಾಗಿ ಬಂದಿಲ್ಲ, ಚಿತ್ರದುರ್ಗ ಹಾಗೂ ತುಮಕೂರುಗಳಲ್ಲಿ ಹೆಚ್ಚು ಬೆಳೆ ಬಂದಿಲ್ಲ. ಇಂತಹ ಕಡೆಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅಲ್ಲಿನ ಡಿ. ಸಿ. ಗಳಿಗೆ ತಿಳಿಸಲಾಗಿದೆ. ಇದರಲ್ಲಿ ತೊಂದರೆಯಾಗಿದೆ ಎಂದು ನಿರ್ದಿಷ್ಟವಾಗಿ ಯಾರೂ ಹೇಳಿಲ್ಲ. ಈ ಸಾರಿ ಭತ್ತದ ಬೆಳೆ ಕೆಲವು ಕಡೆ ಚೆನ್ನಾಗಿ ಬಂದಿದೆ. ಸರ್ವೆತ್ ಕ್ಯಾನರ ನಾರ್ತ್ ಕ್ಯಾನರಾ ಚಿಕ್ಕಮಗಳೂರು, ಶಿವಮೊಗ್ಗ, ರಾಯಚೂರು ಮತ್ತು ಬಳ್ಳಾರಿ ಈ ಜಿಲ್ಲೆಯ ಕೆಲವು ಭಾಗಗಳಲ್ಲಿ ನಿರೀಕ್ಷಿಸಿದಷ್ಟು ಬೆಳೆ ಬಂದಿವೆ. If the hon. Members feel that there is difficulty, Government will welcome suggestion and it will consider whether levy is to be continued or not.

1-30 P. M.

ಶ್ರೀ ಎಚ್. ಬಿ. ಜ್ವಾಲನಯ್ಯ.—(ಅ) ಪ್ರಶ್ನೆಗೆ ಉತ್ತರವಾಗಿ 1,01,760 ಟನ್ನುಗಳು ಎಂದು ಹೇಳಿದ್ದೀರಿ. ಇದರಲ್ಲಿ ಸೊಸೈಟಿಗಳಲ್ಲಿ ಎಷ್ಟು ಸ್ಟಾಕ್ ಮಾಡಿದ್ದಿರಿ, ರೈಸ್ ಮಿಲ್‌ಗಳಲ್ಲಿ ಎಷ್ಟು ಸ್ಟಾಕ್ ಮಾಡಿದ್ದಿರಿ. ಮತ್ತು ಅವರುಗಳು ಷಾರ್ಜ್(ಜ್ ಬಗ್ಗೆ ಎಷ್ಟು ಕ್ಲೈಮ್ ಮಾಡಿದ್ದಾರೆ, ಸರ್ಕಾರದವರು ಎಷ್ಟು ಅರೋ ಮಾಡಿದ್ದಾರೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಆ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಬೋಳಾ ರಘುರಾಮಶೆಟ್ಟಿ.—ಈಗ ಲೆವಿ ಧಾರಣೆಗೂ ಮಾರ್ಕೆಟ್ ಧಾರಣೆಗೂ 30 ರೂಪಾಯಿಗಳ ವ್ಯತ್ಯಾಸ ಇದೆ. ಇದೇ ವಿಚಾರದಲ್ಲಿ ಕೆಲವರು ಹೈಕೋರ್ಟಿಗೆ ಹೋದಾಗ ಹೈ ಕೋರ್ಟಿನವರು ಮಾರ್ಕೆಟ್ ರೇಟನ್ನು ಲೆವಿ ಭತ್ತಕ್ಕೆ ಕೊಡಬೇಕೆಂದು ಹುಕುಂ ಸಹ ಕೊಟ್ಟಿದ್ದಾರೆ. ಇವೆಲ್ಲಾ ಕಾರಣಗಳಿಂದ ಮತ್ತು ಈಗ ಆಕಾರದ ಸಮಸ್ಯೆ ಒತ್ತಡ ಕಡಿಮೆಯಾಗಿರುವುದರಿಂದ ಕಡ್ಡಾಯ ಲೆವಿ ಪದ್ಧತಿಯನ್ನೇ ತೆಗೆದುಬಿಡುತ್ತೀರಾ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಲೆವಿ ಧಾರಣೆಗೂ ಮಾರ್ಕೆಟ್ ಧಾರಣೆಗೂ 30 ರೂಪಾಯಿಗಳ ವ್ಯತ್ಯಾಸವಿರುವುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಸದಸ್ಯರಿಗೆ ಈ ವಿಚಾರ ಹೆಚ್ಚು ತಿಳಿದಿಲ್ಲವೆಂದು ಕಾಣುತ್ತದೆ. ಇವತ್ತಿನದಿನದ ಮಾರ್ಕೆಟ್ ರೇಟಿಗೂ ಲೆವಿ ರೇಟಿಗೂ ಕೇವಲ ಒಂದೆ ರಡು ರೂಪಾಯಿಗಳ ವ್ಯತ್ಯಾಸ ಇದೆ. ಇನ್ನೂ ಕೆಲವು ಕಡೆ ಒಂದೇ ಧಾರಣೆ ಇದೆ. ಗಂಗಾವತಿ ಪ್ರದೇಶದ ಜನ ಲೆವಿಗಿಂತಲೂ ಹೆಚ್ಚಿನ ಬತ್ತವನ್ನು ತಮ್ಮಲ್ಲಿ ಶೇಖರಣೆ ಮಾಡಲು ಸ್ಥಳ ಇಲ್ಲವೆಂದು ಸರ್ಕಾರಕ್ಕೆ ಕೊಡುತ್ತಿದ್ದಾರೆ. ರೈತರ ಅನುಕೂಲಕ್ಕಾಗಿಯೇ ಲೆವಿ ಪದ್ಧತಿಯನ್ನು ಇಡಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಈ ಪದ್ಧತಿ ಬೇಡ ಎಂದು ಹೇಳಿದರೆ ಅದನ್ನು ಸರ್ಕಾರ ಪರಿಶೀಲನೆ ಮಾಡು ವುದಕ್ಕೆ ಸಿದ್ಧವಿದೆ.

ಶ್ರೀ ನದಾಫಿವಪ್ಪಪಾಟೀರ್.—ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಶೇಖರಣೆ ಮಾಡಿದ್ದ ಲೆವಿ ಜೋಳವನ್ನು ಜನರಿಗೆ ಹಂಚಲು ಜಿಲ್ಲಾಧಿಕಾರಿಯವರು ಕ್ರಮ ತೆಗೆದುಕೊಳ್ಳದಿರುವುದರಿಂದ ಜೋಳ ಕೆಡುವ ಸ್ಥಿತಿ ಬಂದಿದೆ. ಇದರಿಂದ ಆಗುವ ಲಾಸ್‌ಗೆ ಮಾರ್ಕೆಟಿಂಗ್ ಸೊಸೈಟಿಯವರು ಹೊಣೆಯೇ ಅಥವಾ ಸರ್ಕಾರದವರೇ ಮತ್ತು ಎಲ್ಲಿ ನಾಶ್ಯಾಣಿಗಿಂತ ಕಡಿಮೆ ಬೆಳೆಯಾಗಿದೆಯೋ ಅಲ್ಲಿ ಲೆವಿ ವಸೂಲಿ ಮಾಡಬಾರದೆಂದು ಸರ್ಕಾರದವರು ಜಿಲ್ಲಾಧಿಕಾರಿಯವರಿಗೆ ಆದೇಶ ಕೊಟ್ಟಿದ್ದಾರೆಯೇ ?

ಅಧ್ಯಕ್ಷರು.—ಈ ಪ್ರಶ್ನೆ ಇದಕ್ಕೆ ಸಂಬಂಧವಿಲ್ಲದ್ದರಿಂದ ಕೇಳುವುದಕ್ಕಾಗುವುದಿಲ್ಲ.

Sri D. B. KALMANKAR.—Out of these 1,01,760 tons, may I know what is collection districtwise ?

Sri B. VITHALDAS SHETTY.—Please put a separate question and then I will be able to answer.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗತಾನೆ ಮಾನ್ಯಮಂತ್ರಿಗಳು ಮಾರ್ಕೆಟ್ ಧಾರ ಣೆಗೂ ಲೆವಿ ಧಾರಣೆಗೂ ಎರಡು ಮೂರು ರೂಪಾಯಿಗಳ ವ್ಯತ್ಯಾಸ ಇದೆ ಎಂದು ಹೇಳಿದರು. ಮತ್ತು ಶ್ರೀಮತಿ ಫರ್ನಾಂಡಿಸ್ ಅವರು ಅವರ ಕ್ಷೇತ್ರದಲ್ಲಿ ಕೆಲವು ಗೋಡೌನ್‌ಗಳಲ್ಲಿ ಸ್ಟಾಕ್ ಆಗಿರುವ ಮಾಲು ಕೆಡುತ್ತಿದೆ ಎಂದು ಹೇಳಿದಾಗ ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿ ದರು. ಹಳೆಯ ಬತ್ತದ ರೇಟಿಗೂ ಹೊಸ ಬತ್ತದ ರೇಟಿಗೂ 20-30 ರೂಪಾಯಿಗಳ ವ್ಯತ್ಯಾಸ ಇವತ್ತು ಇದೆ. ಇಂತಹ ಹಳೆಯ ಭತ್ತ ಕೆಡುತ್ತಿದೆ ಎಂದು ಹೇಳಿದರೂ ಕೂಡ ಸರ್ಕಾರದ ಗಮ ನಕ್ಕೆ ಬಂದಿಲ್ಲ ಎಂದು ಹೇಳುತ್ತಾರೆ. ಸರ್ಕಾರದ ಗಮನಕ್ಕೆ ಬರದಿರುವುದಕ್ಕೆ ಆಫೀಸರ್‌ಗಳ ಅಭಾವವೇ, ಆಫೀಸರ್‌ಗಳು ಹೋಗಿ ನೋಡುವುದಕ್ಕೆ ಕಾಲದ ಅಭಾವವಿದೆಯೇ, ಅಥವಾ ಶಕ್ತಿಯ ಅಭಾವವಿದೆಯೇ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ವಿಠಲ್‌ದಾಸ್ ಶೆಟ್ಟಿ.—ಎಲ್ಲೋ ಏನೋ ನಡೆದಿದೆ ಎಂದು ಹೇಳಿದರೆ ಉತ್ತರ ಕೊಡು ವುದಕ್ಕಾಗುವುದಿಲ್ಲ. ಇಂತಹ ಸ್ಥಳದಲ್ಲಿ ಇಂತಹ ಗೋಡೌನ್‌ನಲ್ಲಿರುವ ಸ್ಟಾಕ್ ಕೆಟ್ಟಿದೆ ಎಂದು ತಿಳಿಸಿದರೆ ನಾನು 24 ಗಂಟೆಯೊಳಗೆ ಉತ್ತರ ತರಿಸಿ ಕೊಡುತ್ತೇನೆ.

Repair of Kudlur Tank in Channapatna Taluk

191. Sri T. V. KRISHNAPPA (Channapatna).—

Will the Minister of State for Minor Irrigation be pleased to state:—

(*a*) whether Government have issued instructions to repair the Kudlur Tank, Channapatna Taluk which breached four years ago as per statement made on the floor of the House;

(*b*) if so, whether Government is aware that the repair work has not been attended to so far in spite of the instructions issued?

Smt. BASAVARAJESHWARI (Deputy Minister for Social Welfare) [On behalf of Sri A. J. DODDAMETI (Minister of State for Minor Irrigation)].—

(*a*) Yes.

(*b*) The repair work has been attended to and completed. Restoration work is under progress.

ಶ್ರೀ ಟಿ. ವಿ. ಕೃಷ್ಣಪ್ಪ.— (ಅ) ಪ್ರಶ್ನೆಗೆ ಉತ್ತರವಾಗಿ ದುರಸ್ತು ಕಾಮಗಾರಿಯನ್ನು ಕೈಕೊಂಡಿದ್ದು ಪೂರ್ತಿಗೊಳಿಸಲಾಗಿದೆ ಎಂದು ಹೇಳಲಾಗಿದೆ. ಆದರೆ ಆ ರೀತಿ ಕೆಲಸವಾಗಿಲ್ಲ. ಈ ಕೆಲಸ ಮುಗಿಯಬೇಕಾದರೆ ಇನ್ನೂ ಎಷ್ಟು ವರ್ಷ ಬೇಕಾಗುತ್ತದೆ?

† ಶ್ರೀಮತಿ ಬಸವರಾಜೇಶ್ವರಿ.—ಕೆರೆಯನ್ನು ಜೀರ್ಣೋದ್ಧಾರ ಮಾಡುವ ಬಗ್ಗೆ 2.34 ಲಕ್ಷ ರೂಪಾಯಿಗಳ ಪೆಟ್ಟಿದಲ್ಲಿ ಅಂದಾಜನ್ನು ತಯಾರಿಸಲಾಗಿದೆ. 1968-69ರಲ್ಲಿ ಸ್ಕೇರ್ಸಿಟಿ ಕಂಡೀಷನ್ ಬಂದಾಗ ಒಂದು ಲಕ್ಷ ಎರಡು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಪೀಸ್‌ಮೀಲ್ ಆಗಿ ಕೆಲಸವನ್ನು ಮಾಡಲಾಗಿದೆ. ಉಳಿದ ಕೆಲಸ ಮಾಡಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಫಿಕ್ಸ್ ಆದಮೇಲೆ ಕೆಲಸ ಪ್ರಾರಂಭ ಮಾಡಲಾಗುತ್ತದೆ.

ಶ್ರೀ ಟಿ. ವಿ. ಕೃಷ್ಣಪ್ಪ.—ನಾಲ್ಕು ವರ್ಷವಾದರೂ ಕೂಡ ಈ ಕೆರೆಯ ಕೆಲಸ ಮುಗಿದಿಲ್ಲ. ಅಂದರೆ ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ ಅಲ್ಲವೇ?

ಶ್ರೀಮತಿ ಬಸವರಾಜೇಶ್ವರಿ.—1968-69ರಲ್ಲಿ ಪೀಸ್ ಮೀರ್‌ನಲ್ಲಿ ಸ್ವಲ್ಪ ಕೆಲಸ ಮಾಡಲಾಗಿದೆ. ಉಳಿದ ಕೆಲಸ ಮಾಡಲು ಟೆಂಡರ್ ಕರೆದಿದ್ದೇವೆ. ಟೆಂಡರ್ ಫಿಕ್ಸ್ ಆದಮೇಲೆ ಕೆಲಸ ಪ್ರಾರಂಭ ಮಾಡಲಾಗುತ್ತದೆ.

ಶ್ರೀ ವಿ. ಎಸ್. ಶಿವಪ್ಪ.—ಹಳೆಯ ಕೆರೆಗಳ ಜೀರ್ಣೋದ್ಧಾರ ಕಾಮಗಾರಿಯನ್ನು ಮುಗಿಸುವವರೆಗೆ ಹೊಸ ಕೆರೆಗಳನ್ನು ಮಾಡಿಸುವುದಿಲ್ಲವೆಂದು ಸರ್ಕಾರದವರು ಹೇಳಿದ್ದಾರೆ. ಇಪ್ಪತ್ತಿನದಿವಸ ಸಾವಿರಾರು ಕೆರೆಗಳ ಜೀರ್ಣೋದ್ಧಾರ ಕೆಲಸವಾಗದೆ, ಆ ಕೆರೆಗಳು ನಶಿಸಿಹೋಗುತ್ತಿವೆ. ಈಗಲಾದರೂ ಕೂಡ ಹಳೆಯ ಮೈಸೂರಿನಲ್ಲಿರುವ ಸಾವಿರಾರು ಕೆರೆಗಳ ಜೀರ್ಣೋದ್ಧಾರ ಕೆಲಸವನ್ನು ಮಾಡಿಸುತ್ತೀರಾ?

ಶ್ರೀಮತಿ ಬಸವರಾಜೇಶ್ವರಿ.—ರೆಸ್ಟೋರೇಷನ್ ಕೆಲಸ ಮಾಡಬಾರದು ಎಂಬುದು ಸರ್ಕಾರದ ನೀತಿ ಅಲ್ಲ. ಅನೇಕ ಕೆರೆಗಳ ಜೀರ್ಣೋದ್ಧಾರ ಕಾಮಗಾರಿ ಕೆಲಸವನ್ನು ಮಾಡುತ್ತಿದ್ದೇವೆ. ಹಣ ಒದಗಿದಂತೆ ನೋಡಿಕೊಂಡು ಈ ಕೆಲಸ ಮಾಡಬೇಕಾಗಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಕೆಲವು ಕೆರೆಗಳನ್ನು ದುರಸ್ತು ಮಾಡಿದರೂ ಕೂಡ ಜಾಗ್ರತೆ ಒಡೆದುಹೋಗುತ್ತಿವೆ. ಇದು ಇರಿಗೇಷನ್ ತಪ್ಪೋ ಅಥವಾ ಕಂಟ್ರಾಕ್ಟರ್‌ಗಳ ತಪ್ಪೋ ಎಂಬುದನ್ನು ಕಂಡುಹಿಡಿದು ಸಂಬಂಧಪಟ್ಟವರ ಮೇಲೆ ಕ್ರಮ ತಗೆದುಕೊಂಡಿದ್ದೀರಾ?